# ಫೈಬ್ರಾಯ್ಡ್ ಜಾಗೃತಿ ಮಾಸ: ಸ್ತ್ರೀರೋಗಗಳ ನಿಯಮಿತ ತಪಾಸಣೆ ಏಕೆ ಅಗತ್ಯ?

motherhood
women & children's hospital



ಪಾಯಲ್ (ಹೆಸರು ಬದಲಿಸಿದೆ) ಎಂಬ ಹೆಸರಿನ 36 ವರ್ಷದ ಮಹಿಳೆ ಅನಿಯಮಿತವಾದ ಮುಟ್ಟು ಮತ್ತು ಅತಿಯಾದ ರಕ್ತಸ್ರಾವದಿಂದ ಭಯಾನಕ ಮತ್ತು ಗೊಂದಲದ ಋತುಚಕ್ರವನ್ನು ಅನುಭವಿಸುತ್ತಿದ್ದರು. ತಿಂಗಳಿಗೆ 5 ದಿನಗಳಿದ್ದ ಋತುಚಕ್ರದ ಅವಧಿಯು ಸುಮಾರು 10 ದಿನಗಳವರೆಗೆ ವಿಸ್ತರಿಸಲು ಪ್ರಾರಂಭಿತು. ಅವರ ದೇಹದಿಂದ ಮಾಂಸದ ತುಣುಕುಗಳೇ ಹೊರಬರುತ್ತಿವೆಯೇನೋ ಎಂದು ಭಾಸವಾಗುವಷ್ಟು ಪ್ರಮಾಣದಲ್ಲಿ ರಕ್ತಸ್ರಾವವಾಗುತ್ತಿತ್ತು. ಅತಿಯಾದ ರಕ್ತಸ್ರಾವದ ಪರಿಣಾಮವಾಗಿ ಅವರ ಹಿಮೋಗ್ಲೋಬಿನ್ ಮಟ್ಟವು 12ರಿಂದ 3.9ಕ್ಕೆ ಕಡಿಮೆಯಾಯಿತು. ಪುನರಾವರ್ತಿತ ರಕ್ತ ವರ್ಗಾವಣೆಯ ಹೊರತಾಗಿಯೂ ಅವರ ಹಿಮೋಗ್ಲೋಬಿನ್ ಮಟ್ಟ 5ಕ್ಕಿಂತ ಮೇಲೇರಲಿಲ್ಲ. ಕಾರಣ, ಅವರಲ್ಲಿ ರಕ್ತಸ್ರಾವ ನಿರಂತರವಾಗಿರುತ್ತಿತ್ತು.

ಚಿಕಿತ್ಸೆಗಾಗಿ ಅನೇಕ ತಜ್ಞರನ್ನು ಅವರು ಸಂಪರ್ಕಿಸಿದರು. ಗರ್ಭಕಂಠ (ಗರ್ಭಾಶಯ) ತೆಗೆಯುವುದು ಅಥವಾ ತೆರೆದ ಶಸ್ತ್ರಚಿಕಿತ್ಸೆ ಅನಿವಾರ್ಯ ಎಂದು ಅವರೆಲ್ಲರೂ ಸಲಹೆ ನೀಡಿದರು. ಆದರೆ ಪಾಯಲ್ ಅವಿವಾಹಿತರಾಗಿದ್ದರು. ಹೀಗಾಗಿ, ತಮ್ಮ ಗರ್ಭಾಶಯವನ್ನು ಉಳಿಸಲು ಬಯಸಿದ್ದರು. ತನಗೆ ಸಹಾಯ ಮಾಡಬಲ್ಲ ಆಸ್ಪತ್ರೆ ಮತ್ತು ತಜ್ಞರಿಗಾಗಿ ಅವರು ಅನ್ವೇಷಿಸಿದರು. ಈ ಪ್ರಯತ್ನದಲ್ಲಿ ಅವರು ಮದರ್ಹುಡ್ ಆಸ್ಪತ್ರೆಯಲ್ಲಿ ನನ್ನನ್ನು ಭೇಟಿ ಮಾಡಿದರು. ಅತಿಯಾದ ರಕ್ತಸ್ರಾವ ಮತ್ತು ಅನಿಯಮಿತ ಮುಟ್ಟಿನ ಮೂಲ ಕಾರಣವನ್ನು ಪತ್ತೆಹಚ್ಚಲು ಕೆಲವು ಪರೀಕ್ಷೆಗಳಿಗೆ ಒಳಗಾಗುವಂತೆ ಅವರಿಗೆ ನಾವು ಸೂಚಿಸಿದೆವು. ಪಾಯಲ್ ಅವರು 8 ದೊಡ್ಡ ಗಾತ್ರದ ಫೈಬ್ರಾಯ್ಡ್‌ಗಳನ್ನು ಹೊಂದಿದ್ದು, ಅವುಗಳೇ ಅವರಿಗೆ ತೊಂದರೆ ಕೊಡುತ್ತಿವೆ ಎಂದು ಪರೀಕ್ಷೆಯ ಫಲಿತಾಂಶಗಳು ತೋರಿಸಿದವು. ಅವರ ಒಂದು ಫೈಬ್ರಾಯ್ಡ್ ಗರ್ಭಾಶಯದ ಕುಳಿಯಲ್ಲಿತ್ತು. ಅದು ತುಂಬ ದೊಡ್ಡದಾಗಿಯೂ ಇತ್ತು. ಅವುಗಳನ್ನು ತೆಗೆದುಹಾಕುವುದು ತುಂಬ ಕಷ್ಟ. ಗರ್ಭಾಶಯವನ್ನು ತೆಗೆಯುವುದೇ ಅವರಿಗಿರುವ ಏಕೈಕ ಆಯ್ಕೆಯಾಗಿದೆ ಎಂದು ಇತರ ಸ್ತ್ರೀರೋಗ ತಜ್ಞರು ಸೂಚಿಸಲು ಇದೇ ಕಾರಣವಾಗಿರುವ ಸಾಧ್ಯತೆ ಇದೆ. ಪಾಯಲ್ ಅವರಂತೆ ಅನೇಕ ಮಹಿಳೆಯರಿಗೆ ಫೈಬ್ರಾಯ್ಡ್‌ಗಳು ತಮ್ಮ ಸಂತಾನೋತ್ಪತ್ತಿ ಸಾಮರ್ಥ್ಯ ಮತ್ತು ಸಮಗ್ರ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮಗಳನ್ನು ಉಂಟು ಮಾಡುತ್ತಿರುವುದು ತಿಳಿದಿರುವುದಿಲ್ಲ. ಈ ಸ್ಥಿತಿಯ ಪ್ರಮುಖ ಅಂಶಗಳನ್ನು ಮತ್ತು ಮಹಿಳೆಯರು ತಿಳಿದಿರಬೇಕಾದ ಸಂಗತಿಗಳನ್ನು ಅರ್ಥ ಮಾಡಿಕೊಳ್ಳೋಣ.

## ಗರ್ಭಾಶಯದ ಫೈಬ್ರಾಯ್ಡ್‌ಗಳು ಎಂದರೇನು?

ಸಂತಾನೋತ್ಪತ್ತಿ ಸಾಮರ್ಥ್ಯವಿರುವ ವಯಸ್ಸಿನ ಮಹಿಳೆಯರಲ್ಲಿ ಗರ್ಭಾಶಯದ ಫೈಬ್ರಾಯ್ಡ್‌ಗಳು ಹೆಚ್ಚಾಗಿ ಕಾಣಿಸಿಕೊಳ್ಳುತ್ತವೆ. ಅವು ಗಡ್ಡೆಗಳ ರೂಪದಲ್ಲಿದ್ದು, ಗರ್ಭಾಶಯದ ಕ್ಯಾನ್ಸರ್ ಅಲ್ಲದ ಬೆಳವಣಿಗೆಗಳಾಗಿವೆ. ಗಾತ್ರದಲ್ಲೂ ಬದಲಾಗಬಹುದು. ಬರಿಗಣ್ಣಿನಿಂದ ಪತ್ತೆ ಹಚ್ಚಲು ಸಾಧ್ಯವಿಲ್ಲದಷ್ಟು ಚಿಕ್ಕ ಬೀಜಗಳ ಗಾತ್ರದಲ್ಲೂ ಇರುತ್ತವೆ ಅಥವಾ ಗರ್ಭಾಶಯವನ್ನು ಆವರಿಸುವಷ್ಟು ದೊಡ್ಡದಾಗಿಯೂ ಬೆಳೆಯುತ್ತವೆ. ಮಹಿಳೆಯರು ಒಂದು ಅಥವಾ ಹಲವು ಫೈಬ್ರಾಯ್ಡ್‌ಗಳನ್ನು ಹೊಂದಿರಬಹುದು. ಪತ್ತೆ ಹಚ್ಚದೆ ಅಥವಾ ಚಿಕಿತ್ಸೆ ಕೊಡಿಸದೆ ಇದ್ದರೆ ಅವು ಭವಿಷ್ಯದಲ್ಲಿ ಬಹಳಷ್ಟು ಸಮಸ್ಯೆಗಳನ್ನು ಉಂಟುಮಾಡಬಹುದು.

## ಫೈಬ್ರಾಯ್ಡ್‌ಗಳ ಲಕ್ಷಣಗಳು ಇಂತಿವೆ:

- ಮುಟ್ಟಿನ ಸಮಯದಲ್ಲಿ ಅತಿಯಾದ ರಕ್ತಸ್ರಾವ
- ಮುಟ್ಟಿನ ಅವಧಿ ಒಂದು ವಾರಕ್ಕಿಂತ ಹೆಚ್ಚಾಗಿರುವುದು
- ಆಗಾಗ್ಗೆ ಮೂತ್ರ ವಿಸರ್ಜಿಸುವುದು
- ಬೆನ್ನುನೋವು
- ಮಲಬದ್ಧತೆ
- ಶ್ರೋಣಿಯ ನೋವು ಮತ್ತು ಒತ್ತಡ

## ಮಹಿಳೆಯರಲ್ಲಿ ಜಾಗೃತಿ ಏಕೆ ಮಹತ್ವದ್ದು?

ಫೈಬ್ರಾಯ್ಡ್ ಹೊಂದಿದ್ದರೂ ಬದುಕಿನುದ್ದಕ್ಕೂ ಯಾವುದೇ ಗಮನಾರ್ಹ ಚಿಹ್ನೆಗಳನ್ನು ಮತ್ತು ರೋಗಲಕ್ಷಣಗಳನ್ನು ಅನುಭವಿಸದೇ ಇರುವ ಮಹಿಳೆಯರು ಹಲವರಿದ್ದಾರೆ. ಸ್ವಲ್ಪ ಮಟ್ಟಿನ ನೋವು ಅವರಿಗೆ ತೊಂದರೆ ಕೊಡುತ್ತಿರಬಹುದು. ಆದರೆ ಪಾಯಲ್ ಅವರಂತೆ ಕೆಲವರಲ್ಲಿ ಫೈಬ್ರಾಯ್ಡ್‌ಗಳು ಅಸಹನೀಯ ನೋವನ್ನು ಉಂಟು ಮಾಡಿ, ಗರ್ಭಾಶಯದ ಆಕಾರವನ್ನೇ ವಿರೂಪಗೊಳಿಸುವುದೂ ಇದೆ. ಮಹಿಳೆಯರು ಈ ಚಿಹ್ನೆಗಳ ಬಗ್ಗೆ ಎಚ್ಚರಿಕೆ ವಹಿಸಬೇಕು ಮತ್ತು ನಿಯಮಿತ ತಪಾಸಣೆಗಾಗಿ ತಮ್ಮ ವೈದ್ಯರನ್ನು ಭೇಟಿ ಮಾಡಬೇಕು.

## ನಿಯಮಿತ ಸ್ತ್ರೀರೋಗ ತಪಾಸಣೆಯೇ ಪರಿಹಾರ

ದುಃಖಕರ ಸಂಗತಿ ಎಂದರೆ, ಅನೇಕ ಮಹಿಳೆಯರು ಸ್ತ್ರೀರೋಗ ತಜ್ಞರನ್ನು ನಿಯಮಿತವಾಗಿ ಭೇಟಿ ಮಾಡುವುದನ್ನು ನಿರ್ಲಕ್ಷಿಸುತ್ತಾರೆ. ಆರೋಗ್ಯ ಸಮಸ್ಯೆ ಎದುರಾದರೆ ಮಾತ್ರ ವೈದ್ಯರ ಬಳಿಗೆ ಧಾವಿಸುತ್ತಾರೆ. ಇದರಿಂದಾಗಿ ಫೈಬ್ರಾಯ್ಡ್ ಇರುವುದು ಪತ್ತೆಯಾಗದೆ, ಪರಿಸ್ಥಿತಿ ಹದಗೆಟ್ಟು ತೀವ್ರವಾದ ರೋಗಲಕ್ಷಣಗಳು ಕಾಣಿಸಿಕೊಳ್ಳುವಂತೆ ಮಾಡುತ್ತದೆ. ಸಮಯೋಚಿತ ಪತ್ತೆ ಮತ್ತು ಚಿಕಿತ್ಸೆಗಾಗಿ, ಮಹಿಳೆಯರು ಈ ಸಲಹೆ ಪಾಲಿಸಿ:
ನಿಮ್ಮ ಸಂತಾನೋತ್ಪತ್ತಿ ಆರೋಗ್ಯಕ್ಕಾಗಿ ನೀವು ನಿಯಮಿತ ತಪಾಸಣೆಗಳು ಮತ್ತು ಪರೀಕ್ಷೆಗಳಿಗೆ ತೆರಳಿದಾಗ ನಿಮ್ಮ ವೈದ್ಯರು ಫೈಬ್ರಾಯ್ಡ್ ಗಳನ್ನು ಪತ್ತೆಹಚ್ಚಲು ಸಾಧ್ಯವಾಗುತ್ತದೆ. ವಾಡಿಕೆಯ ಶ್ರೋಣಿಯ ಪರೀಕ್ಷೆಗಳು ಗರ್ಭಾಶಯದ ಆಕಾರದಲ್ಲಿ ಯಾವುದೇ ವ್ಯತ್ಯಯಗಳಾಗಿದ್ದಲ್ಲಿ ಗಮನಿಸಲು ಸಹಾಯ ಮಾಡುತ್ತವೆ. ನೀವು ಫೈಬ್ರಾಯ್ಡ್‌ಗಳ ಯಾವುದೇ ರೋಗಲಕ್ಷಣಗಳನ್ನು ಹೊಂದಿದ್ದರೆ, ರೋಗನಿರ್ಣಯವನ್ನು ಖಚಿತಪಡಿಸಲು ಮತ್ತು ಚಿಕಿತ್ಸೆಯನ್ನು ಪ್ರಾರಂಭಿಸಲು ವೈದ್ಯರು ಅಲ್ಟ್ರಾಸೌಂಡ್ ಮತ್ತು ಇತರ ಪ್ರಯೋಗಾಲಯ ಪರೀಕ್ಷೆಗಳನ್ನು ಸೂಚಿಸಬಹುದು.

## ಚಿಕಿತ್ಸೆಗಳು

ಹಾರ್ಮೋನ್ ಔಷಧಿಗಳೊಂದಿಗೆ ಮತ್ತು ಲ್ಯಾಪ್ರೊಸ್ಕೋಪಿಯಂತಹ ಕನಿಷ್ಠ ಆಕ್ರಮಣಕಾರಿ ಶಸ್ತ್ರಚಿಕಿತ್ಸೆಗಳ ಮೂಲಕ ಫೈಬ್ರಾಯ್ಡ್‌ಗಳನ್ನು ನಿವಾರಿಸಬಹುದು. ಮಹಿಳೆಯ ಸಂತಾನೋತ್ಪತ್ತಿ ವ್ಯವಸ್ಥೆಗೆ ಯಾವುದೇ ಹಾನಿಯಾಗದಂತೆ, ಯಾವುದೇ ಗಾಯವಿಲ್ಲದೆ ಸಣ್ಣ ಛೇದನದ ಮೂಲಕ ಈ ಶಸ್ತ್ರಚಿಕಿತ್ಸೆಯನ್ನು ನಿರ್ವಹಿಸಲಾಗುತ್ತದೆ. ಆದ್ದರಿಂದ, ಫೈಬ್ರಾಯ್ಡ್‌ಗಳಿಗೆ ಚಿಕಿತ್ಸೆ ನೀಡಲಾಗುತ್ತದೆ ಮತ್ತು ಗರ್ಭಾಶಯವನ್ನೂ ಸಂರಕ್ಷಿಸಲಾಗುತ್ತದೆ. ಆದರೆ, ಸುಲಭವಾದ ಈ ಚಿಕಿತ್ಸಾ ಆಯ್ಕೆಯ ಬಗ್ಗೆ ಸುಮಾರು 60–70% ಮಹಿಳೆಯರಿಗೆ ಅರಿವೇ ಇಲ್ಲದ ಕಾರಣ, ಗರ್ಭಾಶಯವನ್ನು ತೆಗೆದುಹಾಕುವುದೇ ಏಕೈಕ ಪರಿಹಾರವೆಂಬ ತಯಾತುರಿಯ ನಿರ್ಣಯಕ್ಕೆ ಬರುತ್ತಿದ್ದಾರೆ. ಇದು ಭವಿಷ್ಯದಲ್ಲಿ ಅವರ ಆರೋಗ್ಯದ ಇತರ ಅಂಶಗಳಾದ ಹೃದಯ ಮತ್ತು ಮೂಳೆಯ ಆರೋಗ್ಯದ ಮೇಲೆ ಹೆಚ್ಚು ಪರಿಣಾಮ ಬೀರುತ್ತದೆ. ನಿಯಮಿತ ತಪಾಸಣೆ ಮತ್ತು ನಿಮ್ಮ ವೈದ್ಯರೊಂದಿಗೆ ಮುಕ್ತವಾಗಿ ಮಾತನಾಡುವುದು ಸಮಯೋಚಿತ ಚಿಕಿತ್ಸೆಯ ಮೂಲಕ ತ್ವರಿತವಾಗಿ ಗುಣಮುಖರಾಗಲು ಪೂರಕವಾಗುತ್ತದೆ.

## ಕೊನೆಯ ಮಾತು

ಸರಿಯಾದ ರೋಗನಿರ್ಣಯ ಮತ್ತು ಪರೀಕ್ಷೆಗಳ ಬಳಿಕ ಪಾಯಲ್ ಅವರನ್ನು ಲ್ಯಾಪ್ರೊಸ್ಕೋಪಿಕ್ ಶಸ್ತ್ರಚಿಕಿತ್ಸೆಗೆ ಒಳಪಡಿಸಲಾಯಿತು. ಗರ್ಭಕೋಶದ ಕುಳಿಯಲ್ಲಿನ ದೊಡ್ಡ ಫೈಬ್ರಾಯ್ಡ್ ಸೇರಿದಂತೆ ಎಲ್ಲ 8 ಫೈಬ್ರಾಯ್ಡ್ ಗಳನ್ನು ತೆಗೆದುಹಾಕಲಾಯಿತು.. ಶಸ್ತ್ರಚಿಕಿತ್ಸೆಯ ಬಳಿಕ ಅವರನ್ನು ಬೇಗನೆ ಡಿಸ್ಚಾರ್ಜ್ ಕೂಡ ಮಾಡಿದ್ದು, ಅವರು ಈಗ ಸಂಪೂರ್ಣ ಗುಣಮುಖರಾಗಿದ್ದಾರೆ. ಈಗ ಅವರ ಮುಟ್ಟು ಸಾಮಾನ್ಯವಾಗಿದೆ ಮತ್ತು ಯಾವುದೇ ಹೆಚ್ಚಿನ ಚಿಕಿತ್ಸೆಯಿಲ್ಲದೆ ಹಿಮೋಗ್ಲೋಬಿನ್ ಮಟ್ಟ 12ಕ್ಕಿಂತ ಹೆಚ್ಚಿದೆ. ಫೈಬ್ರಾಯ್ಡ್‌ಗಳು ಪುನರಾವರ್ತನೆಗೊಳ್ಳುವ ಸಾಧ್ಯತೆ ಇರುವುದರಿಂದ ವಾರ್ಷಿಕವಾಗಿ ಸ್ತ್ರೀರೋಗ ತಜ್ಞರಿಂದ ತಪಾಸಣೆ ಮಾಡಿಸಿಕೊಳ್ಳುವಂತೆಯೂ ನಾವು ಅವರಿಗೆ ಸಲಹೆ ನೀಡಿದ್ದೇವೆ. ನಿಯಮಿತ ತಪಾಸಣೆಯು ಆರಂಭಿಕ ಪತ್ತೆ ಮತ್ತು ಚಿಕಿತ್ಸೆಯನ್ನು ಖಚಿತಪಡಿಸುತ್ತದೆ.
ನೀವು ಶ್ರೋಣಿಯ ನೋವು, ಅನಿಯಮಿತ ಮುಟ್ಟುಗಳು ಮುಂತಾದ ಯಾವುದೇ ರೋಗಲಕ್ಷಣಗಳನ್ನು ಅನುಭವಿಸುತ್ತಿದ್ದರೆ, ನಿಮ್ಮ ವೈದ್ಯರ ಅಭಿಪ್ರಾಯವನ್ನು ಪಡೆಯುವುದು ಮತ್ತು ತಪಾಸಣೆ ಮಾಡಿಸಿಕೊಳ್ಳುವುದು ಉತ್ತಮ.



**ಡಾ. ದೀಪಕ್ ರಾವ್**
**ಸಮಾಲೋಚಕರು – ಲ್ಯಾಪ್ರೊಸ್ಕೋಪಿ ಮತ್ತು ಸ್ತ್ರೀರೋಗ ಶಸ್ತ್ರಚಿಕಿತ್ಸೆಗಳು.**
**ಮದರ್‌ಹುಡ್ ಆಸ್ಪತ್ರೆ, ಇಂದಿರಾನಗರ ಮತ್ತು ಎಚ್.ಆರ್.ಬಿ.ಆರ್. ಲೇಔಟ್, ಬೆಂಗಳೂರು**

080 6723 8986
writetous@motherhoodindia.com

MOTHERHOOD HOSPITALS, BENGALURU
BANASHANKARI | ELECTRONIC CITY | HEBBAL | HRBR LAYOUT | INDIRANAGAR | KANAKAPURA ROAD | SARJAPUR ROAD

Care like no other.

www.motherhoodindia.com